

ಒಪ್ಪಿಕೊಂಡರಂತೂ ಮರ್ಯಾದೆ ನೆಲಕಚ್ಚಿ ಹೋಗುತ್ತದೆ. ಹಾಗಾಗಿಯೇ ತಾನೆಷ್ಟು ಪ್ರಪೋಸಲ್‌ಗಳನ್ನು ತಿರಸ್ಕರಿಸಿದ್ದೇನೆ ಎಂಬ ಲೆಕ್ಕದ ಮೇಲೆ ಹುಡುಗಿಯರ ಸ್ಟೇಟಸ್ ನಿಲ್ಲುತ್ತಿತ್ತು.

### ಕಾಲೇಜಿನ ಕಥೆಯೇ ಬೇರೆ!

ಇದು ಹೈಸ್ಕೂಲಿನ ವಿಷಯವಾದರೆ ಕಾಲೇಜಿಗೆ ಬರುವಷ್ಟರಲ್ಲಿ ಮೈಮನಗಳ ಸುಳಿಯ ರೀತಿ ನೀತಿಗಳು ಬದಲಾಗಿ ಪ್ರೇಮ ನಿವೇದನೆಯ ಪರಿಗಳೂ ಬದಲು. ಇಲ್ಲಿ ಪತ್ರದ ಜೊತೆಗೆ ಒಂದು ಕೆಂಪು ಗುಲಾಬಿ ಕಡ್ಡಾಯ. ಹುಡುಗ ಕೊಟ್ಟ ಪತ್ರಕ್ಕೆ ಹುಡುಗಿ 'ನೀನು ಹೀಗೆ ಅಂತ ಗೊತ್ತಿರ್ಲಿಲ್ಲ', 'ನಿನ್ನ ಒಳ್ಳೆ ಫ್ರೆಂಡ್ ಅಂದ್ಕೊಂಡಿದ್ದೆ', 'ನಿನ್ನ ಯಾವತ್ತೂ ಆ ದೃಷ್ಟೀಲಿ ನೋಡೇ ಇರ್ಲಿಲ್ಲ' ಎಂಬೆಲ್ಲ ಕುತ್ತಿಗೆ ಮೇಲಿನ ಡೈಲಾಗ್‌ಗಳು ಉರುಳುರುಳಿ ಕೊನೆಗೆ 'ನಂಗೆ ಯೋಚ್ನೆ ಮಾಡೋಕೆ ಟೈಮ್ ಬೇಕು' ಎಂದು ಬಿಗುವಾಗಿ ಹೇಳಿ ನಡೆದರೆ, ಹುಡುಗನ ಎದೆಯಲ್ಲಿ ಅವಲಕ್ಕಿ ಕುಟ್ಟಿದ ಅನುಭವ.

'ಅವಳು ಎಷ್ಟು ಟೈಮು ತೆಗೆದುಕೊಳ್ಳಬಹುದು', 'ಒಪ್ಪಿಕೊಳ್ಳದಿದ್ದರೇನು ಗತಿ' ಎಂಬೆಲ್ಲ ಯೋಚನೆಗಳಲ್ಲಿ ಹಲವು ರಾತ್ರಿಗಳು ಉರಿದು ಹೋಗುವುದೋ, ಕೊನೆಗೊಂದು ದಿನ ಕ್ಲಾಸ್ ರೂಮಿನಲ್ಲಿ ಮುಂದಿನ ಬೆಂಚಿನಲ್ಲಿ ಕೂತಿದ್ದವಳು ತಿರುಗಿ ನೋಡಿ ನಕ್ಕಾಗ, ಮನೆಗೆ ಹೋಗುವ ದಾರಿಯ ತಿರುವಲ್ಲಿ ತುಸು ನಿಂತು ತುಟಿ ಕೊಂಕಿಸಿ ಕೆಣಕಿದಾಗ ಅಥವಾ ಗೆಳತಿಯ ಕೈಯಲ್ಲಿ 'ಒಪ್ಪಿಕೊಳ್ಳುತ್ತೇನೆ. ಆದರೆ ಅಪ್ಪ ಅಮ್ಮನ ಒಪ್ಪಿಸುವುದು ನಿನ್ನ ಜವಾಬ್ದಾರಿ' ಎಂದು ಭವಿಷ್ಯದ ಬದುಕಿನ ಧೀರ ಗಂಭೀರ ಪ್ರಬಂಧ ಬರೆದು ಕಳಿಸಿದಾಗ ಹುಡುಗನ ನಿದ್ದೆಗೆಟ್ಟ ಕಂಗಳಲ್ಲಿ ಏಳಲ್ಲ, ನೂರು ಬಣ್ಣದ ಕಾಮನಬಿಲ್ಲು!

ಪ್ರೇಮಕ್ಕೆ ಒಪ್ಪಿಗೆಯ ರುಜು ಸಿಕ್ಕ ಮೇಲೆ ಕದ್ದುಮುಚ್ಚಿ ಭೇಟಿಯಾಗುವ ಆಟ ಶುರು. ಊರ ತೇರಿನಲ್ಲಿ ಅಮ್ಮನ ಜೊತೆ ಬಂದಾಗ ಬೀರುವ

**ರಾಜ, ಗಂಧರ್ವ, ದೇವ ಯಾರೇ ಆಗಿರಲಿ... ವಿಹಾರಕ್ಕೆ ಹೋದಾಗ, ಬೇಟೆಯಲ್ಲಿ ತೊಡಗಿದಾಗ, ರಾಜಕಾರ್ಯದಲ್ಲಿರುವಾಗ ದಾರಿಯಲ್ಲೋ ಕಾಡಿನಲ್ಲೋ ಒಂದು ಚಂದದ ಹುಡುಗಿ ಕಂಡು ಮನಸೋತು ವರಿಸಿದ ಉದಾಹರಣೆಗಳು ಮೊಗೆಮೊಗೆದು ಕೊಡಬಹುದು. ಆದರೆ ಅದೇ ಹೆಣ್ಣೊಬ್ಬಳು ಗಂಡಿನ ಮೇಲೆ ಮೋಹಿತಳಾಗಿ ಪ್ರೇಮನಿವೇದನೆ ಮಾಡಿಕೊಂಡ ಉದಾಹರಣೆಗಳು ಎಷ್ಟಿವೆ?**